# ಡೀಪ್‌ಸೀಕ್

## ವಿಶ್ವಕ್ಕೆ ಚೀನಾದ ಸ್ವೀಟ್ ಶಾಕ್!

**ಚಾಟ್‌ಜಿಪಿಟಿ ಮಾದರಿಯಲ್ಲಿ ರೂಪುಗೊಂಡ ಚೀನಾದ ಕೃತಕ ಬುದ್ಧಿಮತ್ತೆ ಚಾಟ್‌ಬಾಟ್ ಟೆಕ್‌ಲೋಕದಲ್ಲಿ ಹೊಸ ಹೊಳಪು ಮೂಡಿಸಿದೆ. ಬಿಡುಗಡೆಗೊಂಡ ಕೆಲ ದಿನಗಳಲ್ಲಿ ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಕಂಪನ ಉಂಟುಮಾಡಿದೆ.**

■ **ಶಶಿಕುಮಾರ್ ಸಿ.**


ಜನವರಿ 20ರಂದು ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ 2ನೇ ಬಾರಿಗೆ ಪದಗ್ರಹಣ ಮಾಡುವ ಸಮಯದಲ್ಲೇ, ಜಗತ್ತೇ ತಿರುಗಿ ನೋಡುವಂತಹ 'ಡೀಪ್‌ಸೀಕ್ ಆರ್1' ಹೆಸರಿನ ಪಠ್ಯ ಆಧರಿತ ಕೃತಕ ಬುದ್ಧಿಮತ್ತೆ (ಎಐ) ಚಾಟ್‌ಬಾಟ್ ಅನ್ನು ಚೀನಾ ಪರಿಚಯಿಸಿದೆ. ಇದು ಎಐ ಲೋಕದಲ್ಲಿ ಬಿರುಗಾಳಿ ಎಬ್ಬಿಸಿದ್ದಲ್ಲದೆ, ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಕಂಪನ ಉಂಟುಮಾಡಿದೆ.

'ಡೀಪ್‌ಸೀಕ್ ಆರ್1' ಒಂದು ಎಐ ತಂತ್ರಜ್ಞಾನ. ಅತಿ ಕಡಿಮೆ ಸಮಯದಲ್ಲಿ, ಕಡಿಮೆ ವೆಚ್ಚದಲ್ಲಿ ಅಮೆರಿಕದ ಚಾಟ್‌ಜಿಪಿಟಿ ಮಾದರಿಯಲ್ಲೇ ಅದಕ್ಕಿಂತಲೂ ಶಕ್ತಿಶಾಲಿ ಎಐ ತಂತ್ರಜ್ಞಾನವಾಗಿ ಜಗತ್ತಿಗೆ ಪರಿಚಯಗೊಂಡಿದೆ. ಇದರ ಬಳಕೆ ಉಚಿತವಾಗಿರುವುದು ವಿಶೇಷ. ಸಿಲಿಕಾನ್ ವ್ಯಾಲಿಯಲ್ಲಿನ ಅಮೆರಿಕದ ಎಐ ಏಕಸ್ವಾಮ್ಯತೆಯನ್ನು ಇದು ಛಿದ್ರಗೊಳಿಸಿದೆ.

ಎಐ ಮಾದರಿಗಳು ಚಾಲ್ತಿಯಾಗುವುದು ಡೇಟಾದಿಂದ. ಅಂದರೆ, ಎಐ ಮಾದರಿಗಳಿಗೆ ನಾವೆಷ್ಟು ಡೇಟಾ ಫೀಡ್ ಮಾಡುತ್ತೇವೆಯೋ ಅದಕ್ಕೆ ತಕ್ಕಂತೆ ಸರ್ಚ್ ಮಾಡುತ್ತವೆ. ಬೇಕಾಗಿರುವ ಫಲಿತಾಂಶವನ್ನು ತ್ವರಿತವಾಗಿ ನೀಡುತ್ತವೆ. ಹೀಗೆ ಡೇಟಾವನ್ನೆಲ್ಲಾ ಫೀಡ್ ಮಾಡಲು, ಮಾಡೆಲ್ ರನ್ ಆಗಲು ಪ್ರಮುಖವಾಗಿ ಎಐ ಮಾದರಿಗಳಿಗೆ ಬೇಕಾಗಿರುವುದು ಚಿಪ್. ಇದಕ್ಕಾಗಿ ಪ್ರಮುಖವಾಗಿ ಇದ್ದದ್ದೂ ಎನ್‌ವಿಡಿಯಾ ಚಿಪ್.

ಎಐ ಮಾದರಿಯು ತರಬೇತಿಗೊಂಡ ತಂತ್ರಜ್ಞಾನಕ್ಕಿಂತ ಭಿನ್ನ ಮಾದರಿಯ ತರಬೇತಿಯನ್ನು ಡೀಪ್‌ಸೀಕ್ ಪಡೆದುಕೊಂಡಿದೆ. ಸಾಮಾನ್ಯವಾಗಿ ಎಐ ಮಾದರಿಗಳು ಬೃಹತ್ ಪ್ರಮಾಣದ ಡೇಟಾ ಬಳಸಿಕೊಂಡು ಕಾರ್ಯನಿರ್ವಹಿಸುತ್ತವೆ. ಇದಕ್ಕೆ ಅಷ್ಟೇ ಕಂಪ್ಯೂಟೇಷನಲ್ ಸಂಪನ್ಮೂಲಗಳು ಬೇಕಾಗುತ್ತವೆ. ಆದರೆ ಡೀಪ್‌ಸೀಕ್‌ನ ವಿಧಾನವು ವಿಭಿನ್ನವಾಗಿದ್ದು, ಎಲ್ಲವನ್ನೂ ನೆನಪಿಟ್ಟುಕೊಳ್ಳುವ ಬದಲು ಉತ್ತರಗಳನ್ನು ಎಲ್ಲಿ ನೋಡಬೇಕೆಂದು ತಿಳಿದುಕೊಳ್ಳಲು ಹೆಚ್ಚಿನ ಆದ್ಯತೆ ನೀಡುತ್ತದೆ.

ಸದ್ಯ ಹೆಚ್ಚು ಚಾಲ್ತಿಯಲ್ಲಿರುವ ಚಾಟ್‌ಜಿಪಿಟಿ ಅಭಿವೃದ್ಧಿಗೆ 540 ಮಿಲಿಯನ್ ಡಾಲರ್ ಖರ್ಚು ಮಾಡಲಾಗಿದೆ. ಆದರೆ, ಈ ಡೀಪ್‌ಸೀಕ್ ಅಭಿವೃದ್ಧಿಗೆ ಖರ್ಚು ಮಾಡಿರುವುದು ಕೇವಲ 5.6 ಮಿಲಿಯನ್ ಡಾಲರ್! ಡೀಪ್‌ಸೀಕ್ ಓಪನ್ ಸೋರ್ಸ್ ಆಗಿದ್ದು, ಇದನ್ನು ಬಳಸಿಕೊಂಡು ಇದೇ ಮಾದರಿಯ ಎಐ ಮಾದರಿಗಳನ್ನು ಯಾರು ಬೇಕಾದರೂ ಅಭಿವೃದ್ಧಿಪಡಿಸಬಹುದಾಗಿದೆ. ಚಾಟ್‌ಜಿಪಿಟಿ ಓಪನ್ ಸೋರ್ಸ್ ಅಲ್ಲ.




### ಡೀಪ್‌ಸೀಕ್‌ನ ಮೆದುಳು?

ಡೀಪ್‌ಸೀಕ್ ಹಿಂದಿನ ಮೆದುಳು, 39 ವರ್ಷದ ಲಿಯಾಂಗ್ ವೆನ್‌ಫೆಂಗ್. ಇವರು ವೃತ್ತಿಪರರಿಗಿಂತ, ಹೊಸ ಪದವೀಧರರಲ್ಲಿ ನಂಬಿಕೆ ಹೊಂದಿದವರು. ಅನುಭವಿ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಸಾಂಪ್ರದಾಯಿಕ ವಿಧಾನ ಅನುಸರಿಸಿದರೆ, ಯುವ ಎಂಜಿನಿಯರ್‌ಗಳು ಪ್ರಯೋಗಮುಖಿ ಹಾಗೂ ತಮ್ಮ ಕಾರ್ಯಮಿತಿಯ ಹೊರಗೂ ಯೋಚಿಸುವ ಮನಸ್ಥಿತಿ ಹೊಂದಿರುತ್ತಾರೆ ಅಂತ ನಂಬಿದ್ದಾರೆ.

### ಷೇರು ಮಾರುಕಟ್ಟೆ ಕುಸಿತ

ಚೀನಾದ ಡೀಪ್‌ಸೀಕ್‌ಗೂ ಅಮೆರಿಕದ ಷೇರು ಮಾರುಕಟ್ಟೆಗೆ ಏನು ಸಂಬಂಧ ಅನ್ನುವ ಪ್ರಶ್ನೆ ಇಲ್ಲಿ ಎದುರಾಗುತ್ತದೆ. ಎಐ ಮಾದರಿಗಳಿಗೆ ಅಗತ್ಯವಾದ ಚಿಪ್‌ಗಳನ್ನು ತಯಾರಿಸುತ್ತಿದ್ದ ಕಂಪನಿ ಎನ್‌ವಿಡಿಯಾ. ಇದು ಚಿಪ್ ತಯಾರಿಕೆ ಕಂಪನಿಗಳಲ್ಲೇ ಅಗ್ರಮಾನ್ಯ. ಈ ಚಿಪ್‌ಗಳನ್ನು ಚೀನಾಗೆ ಮಾರಾಟ ಮಾಡಲು ಅಮೆರಿಕದ ಹಿಂದಿನ ಅಧ್ಯಕ್ಷ ಜೋ ಬೈಡನ್ ನಿಷೇಧ ಹೇರಿದ್ದರು. ಅದಾಗಲೇ ಸಾಕಷ್ಟು ಚಿಪ್‌ಗಳನ್ನು ಚೀನಾವು ಸಂಗ್ರಹಿಸಿತ್ತು.

ಟ್ರಂಪ್ ಅಧಿಕಾರಕ್ಕೇರಿದ ದಿನವೇ ಬಿಡುಗಡೆಗೊಂಡ ಡೀಪ್‌ಸೀಕ್, ಜಗತ್ತಿನಾದ್ಯಂತ ಚಾಟ್‌ಜಿಪಿಟಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ, ಅದರಲ್ಲೂ ಅಮೆರಿಕದಲ್ಲೇ ಚಾಟ್‌ಜಿಪಿಟಿಗಿಂತಲೂ ಹೆಚ್ಚು ಡೌನ್‌ಲೋಡ್ ಆಗಿದೆ ಎಂಬುದು ಜಗತ್ತಿನ ಪ್ರಮುಖ ಪತ್ರಿಕೆಗಳ ವರದಿ. ಎಷ್ಟು ಮಂದಿ ಡೀಪ್‌ಸೀಕ್ ಬಳಸುತ್ತಿದ್ದಾರೆ ಅನ್ನೋದನ್ನು ಚೀನಾವು ಇದುವರೆಗೆ ಬಹಿರಂಗಗೊಳಿಸಿಲ್ಲ. ಎಐ ಮಾದರಿ ರೂಪಿಸಲು ನೂರಾರು ಮಿಲಿಯನ್ ಹಣ ಬೇಕು ಎನ್ನುತ್ತಿದ್ದ ಅಮೆರಿಕ ಟೆಕ್ ದಿಗ್ಗಜರ ವಾದವನ್ನು ಹುಸಿಗೊಳಿಸಿ, ಕಡಿಮೆ ಹಣದಲ್ಲಿ ಜಗತ್ತಿನ ಪ್ರಭಾವಶಾಲಿ ಎಐ ಮಾದರಿಯನ್ನು ರೂಪಿಸಿದ ಕಾರಣಕ್ಕೆ ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಕುಸಿತ ಉಂಟಾಗಿದೆ. ಜೊತೆಗೆ ಎನ್‌ವಿಡಿಯಾ ಕಂಪನಿಗೆ ಕೆಲವೇ ದಿನಗಳಲ್ಲಿ 600 ಬಿಲಿಯನ್ ಡಾಲರ್ ನಷ್ಟ ಉಂಟಾಗಿದೆ.

### ಏನೆಲ್ಲಾ ಮಾಡುತ್ತೆ ಡೀಪ್‌ಸೀಕ್?

- ಹೆಚ್ಚು ಡೇಟಾ ವಿಶ್ಲೇಷಿಸಿ, ಮಾದರಿಗಳನ್ನು ಗುರುತಿಸಲು ಮತ್ತು ಭವಿಷ್ಯದ ಘಟನೆಗಳನ್ನು ಊಹಿಸಲು ಸಹಾಯ ಮಾಡುತ್ತದೆ.
- ಹೆಚ್ಚು ಸಮಯ, ಹೆಚ್ಚು ಸಂಪನ್ಮೂಲಗಳ ಬಳಕೆಯನ್ನು ಕಡಿತಗೊಳಿಸುತ್ತದೆ.
- ಭಾಷೆ ಅರ್ಥಮಾಡಿಕೊಳ್ಳುವುದು, ಭಾಷಾ ಅನುವಾದ, ಪಠ್ಯ ವಿಶ್ಲೇಷಣೆ ಮಾಡುವುದು.
- ಚಿತ್ರ, ವಿಡಿಯೊ ಗುರುತಿಸಲು ಮತ್ತು ವಿಶ್ಲೇಷಿಸಲು ಎಐ ತಂತ್ರಜ್ಞಾನ ಬಳಸುತ್ತದೆ.
- ಬಳಕೆದಾರರ ಆದ್ಯತೆಗಳನ್ನು ಆಧರಿಸಿ ಉತ್ಪನ್ನಗಳು, ಸೇವೆಗಳು ಅಥವಾ ವಿಷಯಗಳನ್ನು ಶಿಫಾರಸು ಮಾಡುತ್ತದೆ. ■